INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -2, July-August, 2022,
PageNo,01-11
Peer Reviewed Journal, Referred Journal

# “ಸಾಂಸ್ಕೃತಿಕ ಹಿನ್ನಲೆಯಲ್ಲಿ ಜಾನಪದ ವಸ್ತುಸಂಗ್ರಹಾಲಯ ಒಂದು ಐತಿಹಾಸಿಕ ವಿಶ್ಲೇಷಣೆ.”

ಜಗದೀಶ.ಹೆಚ್.ಎಂ.[1]
ಲೋಕೇಶ. ಸಿ.ಈ[2]

ಮೈಸೂರು ಐತಿಹಾಸಿಕತೆಗೆ ಹೆಸರುವಾಸಿಯಾದ ನಗರ. ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನದೇ ಆದ ವಿಭಿನ್ನವಾದ ಶೈಲಿಯ ಲಕ್ಷಣಗಳನ್ನು ಹೊಂದಿದ್ದು ಇವು ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವಕ್ಕೆ ಎಡೆಮಾಡಿಕೊಟ್ಟಿದೆ. ಆರಮನೆಗಳು, ಪಾರಂಪರಿಕ ಕಟ್ಟಡಗಳು ಹಾಗೂ ಐತಿಹಾಸಿಕ ನೆಲೆಗಳ ಜೊತೆಗೆ ಈ ಸಾಲಿನಲ್ಲಿ ವಸ್ತುಸಂಗ್ರಹಾಲಯಗಳು ನಿಲ್ಲುತ್ತವೆ. 10ನೇ ಶತಮಾನದ ಕೈಗಾರಿಕಾ ಕ್ರಾಂತಿಯ ಫಲವಾಗಿ ವಿದೇಶಿಯರು ತಮ್ಮ ಜಾನಪದ ಸಾಧನಗಳನ್ನು ತುಂಬಾ ಜಾಣತನದಿಂದ ರಕ್ಷಿಸಲು ಮುಂದಾದರು. ಜಾನಪದ ವಸ್ತುಸಂಗ್ರಹಾಲಯವನ್ನು ಮೊದಲು ಸ್ಥಾಪಿಸಿದ ಕೀರ್ತಿ ಆರ್ಥ್‌ರ್ ಜೆಜೆಲಿಯಸ್‌ರವರಿಗೆ ಸಲ್ಲುತ್ತದೆ. ಅನಂತರದಲ್ಲಿ 20ನೇ ಶತಮಾನದ 60ರದಶಕದಲ್ಲಿ ಜಾನಪದ ವಸ್ತುಸಂಗ್ರಹಾಲಯಗಳು ಭಾರತದಲ್ಲಿಯೂ ಕಾಣಿಸಿಕೊಳ್ಳತೊಡಗಿದವು. ರಾಜಸ್ಥಾನದ ಉದಯಪುರದಲ್ಲಿ ದೇವಿಲಾಲ್ ಸಮರ್ ಎಂಬುವರು ಜಾನಪದ ವಸ್ತುಸಂಗ್ರಹಾಲಯವನ್ನು 1952ರಲ್ಲಿ ಮೊಟ್ಟ ಮೊದಲಿಗೆ ಸ್ಥಾಪಿಸಿದರು.

ಮೈಸೂರು ನಗರದ ಕೇಂದ್ರ ಭಾಗದಿಂದ ಪಶ್ಚಿಮಕ್ಕೆ ಸುಮಾರು 5 ಕಿ.ಮೀ. ದೂರದಲ್ಲಿರುವ ಮಾನಸ ಗಂಗೋತ್ರಿಯ ಜಯಲಕ್ಷ್ಮೀವಿಲಾಸ ಅಥವಾ ಕೆಬ್ಬಾಕಟ್ಟೆ ಅರಮನೆಯಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಆಶ್ರಯದಲ್ಲಿ 1967–68ರ ಸಾಲಿನಲ್ಲಿ ಸ್ಥಾಪಿಸಲಾಯಿತು.

ಇದು ದಕ್ಷಿಣ ಪೂರ್ವ ಏಷ್ಯಾದಲ್ಲೇ ಅತಿ ದೊಡ್ಡದಾದ ಮತ್ತು ಸುಸಜ್ಜಿತವಾದ ಜಾನಪದ ಸಂಗ್ರಹಾಲಯವೆಂದು ಹೆಸರು ಪಡೆದಿದೆ. ಮೈಸೂರು ಸಂಸ್ಥಾನದ ಅಂದಿನ ಮಹಾರಾಜರಾದ 3ನೇ ಜಯಚಾಮರಾಜ ಒಡೆಯರ್ ಅವರ ಜ್ಯೇಷ್ಠ ಪುತ್ರಿ ಜಯಲಕ್ಷ್ಮಮ್ಮಣ್ಣಿಯವರಿಗಾಗಿ 1905ರಲ್ಲಿ ಈ

[1].ಸಂಶೋಧಕರು,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಮೈಸೂರು ವಿ.ವಿ ಮೈಸೂರು.
[2]. ಮಾರ್ಗದರ್ಶಕರು & ಪ್ರಾಧ್ಯಾಪಕರು ಮಹಾರಾಜ ಕಾಲೇಜು, ಮೈಸೂರು.

ಅರಮನೆಯನ್ನು ನಿರ್ಮಿಸಲಾಯಿತು. ಇದು 2 ಎಕರೆಯಷ್ಟು ವಿಶಾಲವಾಗಿರುವ ಕಟ್ಟಡ. ಈ ಕಟ್ಟಡ ನಿರ್ಮಾಣ ಕಾರ್ಯವು ನವೆಂಬರ್ ತಿಂಗಳ 1901ರಲ್ಲಿ ಪ್ರಾರಂಭವಾಯಿತು. ಇದು 4 ವರ್ಷಗಳ ಬಳಿಕ ಡಿಸೆಂಬರ್ 1905ರಲ್ಲಿ ಪೂರ್ಣಗೊಂಡಿತು.

ಕಟ್ಟಡದ ವಾಸ್ತು ಶೈಲಿ ಇಸ್ಲಾಂ ಮತ್ತು ಹಿಂದೂ ವಾಸ್ತುಶಿಲ್ಪ ಮಾದರಿಯನ್ನು ಹೋಲುತ್ತದೆ. ಈ ಕಟ್ಟಡದ ಗಾರೆ ಕೆಲಸವನ್ನು ಸ್ಥಳೀಯರೇ ನಿರ್ಮಿಸಿದರು. ಈ ಅರಮನೆಯು ಸುಮಾರು 290 ಬಾಗಿಲುಗಳು, 123 ಕೊಠಡಿಗಳನ್ನು ಹೊಂದಿದೆ. ಉಪ್ಪರಿಕೆಗೆ ಹೋಗಲು ಲಿಫ್ಟನ್ನು ಆ ಕಾಲಕ್ಕೆ ಇಲ್ಲಿ ಅಳವಡಿಸಿರುವುದು ವಿಶೇಷ. ಅರಮನೆಯ ಮಧ್ಯದಲ್ಲಿ ಒಂದು ಕಲ್ಯಾಣ ಮಂಟಪವಿದೆ. ಸುಂದರ ಜಯಲಕ್ಷ್ಮೀ ವಿಲಾಸ ಕಟ್ಟಡದಲ್ಲಿ 1967–68ರಲ್ಲಿ ಜಾನಪದ ವಸ್ತುಸಂಗ್ರಹಾಲಯ ರೂಪುಗೊಳ್ಳಲು ಕಾರಣ ಕನ್ನಡ ಅಧ್ಯಯನ ಸಂಸ್ಥೆಯ ಅಂದಿನ ನಿರ್ದೇಶಕರಾಗಿದ್ದ ದೇಜಗೌ ಮತ್ತು ಅನಂತರದಲ್ಲಿ ನಿರ್ದೇಶಕರಾದ ಹಾ.ಮಾ.ನಾಯಕ ಅವರುಗಳಿಗೆ ಜಾನಪದದ ಬಗೆಗಿನಾಸಕ್ತಿ ಇವರಿಬ್ಬರ ಪರಿಶ್ರಮದ ದ್ಯೋತಕವಾಗಿ ಜಾನಪದ ವಸ್ತುಸಂಗ್ರಹಾಲಯವು ಬೆಳೆದು ನಿಂತಿದೆ.

ನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ ಜಿ.ಶಂ.ಪರಮಶಿವಯ್ಯ ಮತ್ತು ಪ್ರಸಿದ್ಧ ಕಲವಿದರಾಗಿದ್ದ ಪಿ.ಆರ್.ತಿಪ್ಪೆಸ್ವಾಮಿ ಅವರು ಸಂಗ್ರಹಾಲಯವನ್ನು ಕಟ್ಟುವ ಕಾರ್ಯದಲ್ಲಿ ಟೊಂಕ ಕಟ್ಟಿ ನಿಂತರು. ಇವರಿಬ್ಬರು ನಾಡಿನ ಮೂಲೆ ಮೂಲೆಯಲ್ಲಿ ಕ್ಷೇತ್ರಕಾರ್ಯ ನಡೆಸಿ ಮಠಮಾನ್ಯಗಳನ್ನು, ಹಳೆಯ ಮನೆಗಳನ್ನು ಶೋಧಿಸಿ ವಸ್ತುಗಳನ್ನು ಸಂಗ್ರಹಸಿದರು. ಈ ಸಂಗ್ರಹಾಲಯದಲ್ಲಿ 3 ರಥಗಳನ್ನು ತೀರ್ಥಹಳ್ಳಿ ತಾಲೂಕಿನ ಹೊಸಬೀಡು ಮನೆಯ ಮೊಗಸಾಲೆ, 2 ದೋಣಿಗಳು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಗೊಂಬೆ ಮಂಟಪ, ಶಿವಮೊಗ್ಗ ಜಿಲ್ಲೆಯ ಮಾರಿಕಾಂಬ ಮರದ ವಿಗ್ರಹ ಮತ್ತು ಮೆಕ್ಕೆಕಟ್ಟೆಯ ಸುಮಾರು 50 ವಿಗ್ರಹಗಳನ್ನು ಸಂಗ್ರಹಿಸಲಾಗಿದೆ. ವಸ್ತುವಿನ ಪೂರ್ಣ ಮಾಹಿತಿ ಸಂಗ್ರಹಿಸಿದ ದಿನಾಂಕ, ಕೊಟ್ಟವರ ಹೆಸರು, ವಿಳಾಸ ಸಂಗ್ರಹಿಸಿದ ವಸ್ತುವಿನ ಪಾತ್ರ, ಅದರ ಬಗೆಗಿನ ನಂಬಿಕೆ ಇತ್ಯಾದಿ ವಸ್ತುವಿನ ಬಗೆಗಿನ ಲಭ್ಯ ವಿವರಗಳೊಡನೆ ದಾಖಲಾತಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಈ ಮಹನೀಯರು ನಾಡಿನ ಮೂಲೆ ಮೂಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು, ಮಠ – ಮಾನ್ಯಗಳಲ್ಲಿ ಶೋಧಿಸಿ, ಜಾನಪದೀಯ ವಸ್ತುಗಳನ್ನು ಸಂಗ್ರಹಿಸಿದರು. ಪ್ರಸ್ತುತ ಮೈಸೂರು ಜಾನಪದ ವಸ್ತುಸಂಗ್ರಹಾಲಯದಲ್ಲಿ ಸುಮಾರು 6000ಕ್ಕೂ ಅಧಿಕ ವಸ್ತುಗಳು ಸಂಗ್ರಹಗೊಂಡಿದ್ದು, ಇಷ್ಟು ದೊಡ್ಡ ಪ್ರಮಾಣದ ಅವಶೇಷಗಳು ಬೇರಾವ ವಿಷ್ಯಾಖಂಡದ ಜಾನಪದ ವಸ್ತುಸಂಗ್ರಹಾಲಯದಲ್ಲಿ ಕಂಡುಬಂದಿಲ್ಲ.

ಜನಪದ ಗ್ರಾಮೀಣ ಜನರ ನಾಡಿ ಮಿಡಿತ ಮತ್ತು ಉಸಿರು ಗ್ರಾಮ ಭಾಗದ ಮೂಲ ಸೊಗಡನ್ನು ಚಿತ್ರಿಸಲು ಜಾನಪದ ಸಾಹಿತ್ಯಗಳು, ಜಾನಪದೀಯ ಜನರು ಬಳಸಿದ ವಸ್ತುಗಳು ಬಹುದೊಡ್ಡ ಆಸ್ತಿ. ಈ

ಆಸ್ತಿಯನ್ನು ಒಳಗೊಂಡಿರುವ ಮೈಸೂರು ಜಾನಪದ ವಸ್ತುಸಂಗ್ರಹಾಲಯವು ತನ್ನದೇ ಆದ ಮಹತ್ವಕ್ಕೆ ಸಾಕ್ಷಿಯಾಗಿದ್ದು, ಮೈಸೂರು ಜಾನಪದ ವಸ್ತುಸಂಗ್ರಹಾಲಯದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಅರಿಯುವುದೇ ಮೂಲ ಉದ್ದೇಶವಾಗಿದೆ.

**ಸಾಂಸ್ಕೃತಿಕ ಮಹತ್ವ**

ಕರ್ನಾಟಕದ ಸಂಸ್ಕೃತಿಯ ಮಹತ್ವದ ಆಗರವಾದ ಈ ಜಾನಪದ ವಸ್ತುಸಂಗ್ರಹಾಲಯವು ಗ್ರಾಮೀಣ ಜನತೆಯ ನೈಜತೆ, ಆಚಾರ–ವಿಚಾರ ಮತ್ತು ರೂಢಿ–ಸಂಪ್ರದಾಯಗಳ ಆಸಕ್ತಿದಾಯಕ ವಿಚಾರಗಳ ಮೇಲೆ ಅಗಾಧವಾದ ಬೆಳಕನ್ನು ಚೆಲ್ಲಲು ಶಕ್ತವಾಗಿದೆ.ಗ್ರಾಮೀಣ ಭಾಗದ ಅದರಲ್ಲಿಯೂ ಮಲೆನಾಡು ಭಾಗದಲ್ಲಿ ಮೇಲಿನ ಅಂಶಗಳಿಗೆ ಬಹಳ ಆನಾಧಿ ಕಾಲದಿಂದಲೂ ಮಹತ್ವವನ್ನು ನೀಡುತ್ತಾ ಬಂದಿದ್ದು, ಉಡುಪಿ, ಮಂಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಶಿವಮೊಗ್ಗ ಭಾಗಗಳಲ್ಲಿ ಈಗಲೂ ಸಹ ಅನೇಕ ಆಚರಣೆಗಳು ಜೀವಂತವಾಗಿವೆ. ಕರಾವಳಿ ಭಾಗದ ಜನರ ಮನೋರಂಜನೆಗಾಗಿ ಮಾಡುವ ಆಚರಣೆಗಳು ನೋಡಲು ಕಣ್ಣಿಗೆ ಬಲು ಅಂದ.

ಕರಾವಳಿ ಭಾಗದಲ್ಲಿ ಸುಗ್ಗಿಯ ಕಾಲದಲ್ಲಿ ಬಹಳ ಹಿಂದಿನಿಂದಲೂ ಮನೋರಂಜನೆಗಾಗಿ ಯಕ್ಷಗಾನ, ಬಯಲಾಟ, ತೊಗಲುಗೊಂಬೆ ಮುಂತಾದ ಕಾರ್ಯಕ್ರಮಗಳು ಪ್ರಸಿದ್ಧವಾಗಿರುವಂತದ್ದು. ಮೈಸೂರಿನ ಜನಪದ ವಸ್ತುಸಂಗ್ರಹಾಲಯದಲ್ಲಿ ಒಮ್ಮೆ ಹೊಕ್ಕಿ ನೋಡಿದರೆ ಈ ಮನೋರಂಜನೆ ಕಾರ್ಯಕ್ರಮಗಳು ಕಣ್ಣಿಗೆ ಕಟ್ಟುವಂತಿದೆ. ಪ್ರಮುಖವಾಗಿ ವಸ್ತುಸಂಗ್ರಹಾಲಯದಲ್ಲಿ ದ.ಕನ್ನಡ ಜಿಲ್ಲೆಯಿಂದ ಮೂಡಲಪಾಯ, ಕೇರಳದಿಂದ ಕಥಕಳಿ ವೇಷಭೂಷಣಗಳು, ಶಿವಮೊಗ್ಗ ಜಿಲ್ಲೆಯ ಗೊಂಬೆ ಮಂಟಪ, ತಮಿಳುನಾಡಿನ ತೆರಕ್ಕೂತ್ತು(ಅರ್ಜುನನ ವೇಷದಾರಿ), ಬಳ್ಳಾರಿ ಮತ್ತು ದ,ಕನ್ನಡ ಜಿಲ್ಲೆಯ ಸೂತ್ರದ ಬೊಂಬೆಗಳು, ಅಂಧ್ರಪ್ರದೇಶದ ವೀಧಿ ನಾಟಕ ವೇಷಭೂಷಣ, ಕೊಡಗು ಹಾಗೂ ಹಳೇ ಮೈಸೂರು ಭಾಗ ಮುಂತಾದ ಕಡೆಗಳಿಂದ ಯಕ್ಷಗಾನದ ವೇಷಭೂಷಣ, ಸ್ತ್ರಿ ವೇಷಭೂಷಣ, ಪುರುಷ ವೇಷಭೂಷಣ, ಗರ್ಭಿಣಿ ವೇಷಭೂಷಣ, ರಾಕ್ಷಸರ ವೇಷಭೂಷಣಗಳು ಹೀಗೆ ಆನೇಕ ಬಗೆಯ ಗ್ರಾಮೀಣ ಮನೋರಂಜನೆ ಸಂಬಂಧಿಸಿದ ವಸ್ತುಗಳಿರಿಸಿದ್ದು, ಇದು ಜಾನಪದದ ಸಂಸ್ಕೃತಿಯ ಪ್ರತೀಕವೆಂಬಂತಿದೆ. ರಾಮಾಯಣಕ್ಕೆ ಸಂಬಂಧಿಸಿದ ಬಯಲಾಟ ಮತ್ತು ತೊಗಲುಗೊಂಬೆಗಳು ಮನಮೋಹಕವಾಗಿದ್ದು, ಕೆಲವು ಗೊಂಬೆಗಳಂತೂ ರೌದ್ರತೆಯಿಂದ ರಾರಾಜಿಸುತ್ತಿವೆ. ಜೀರುಂಡೆಯಿಂದ ಮಾಡಿದ ಬಯಲಾಟದ ಮಂಟಪ ಅತ್ಯಂತ ರಮಣೀಯವಾಗಿದ್ದು ಈ ಜಾನಪದೀಯ ವಸ್ತುಗಳನ್ನು ನೋಡಿದರೆ ಕರಾವಳಿ ಭಾಗದಲ್ಲಿ ನಡೆಯುತ್ತಿದ್ದ ಮನೋರಂಜನಾ ಕಾರ್ಯಕ್ರಮಗಳ ಚಿತ್ತಣ ಬರುವುದಂತೂ ನಿಜ. ಆದರೆ ತೊಗಲುಗೊಂಬೆಯಾಟ ಪ್ರಸ್ತುತ ದಿನಗಳಲ್ಲಿ ಅಳಿವಿನಂಚನ್ನು ಕ್ರಮಿಸುತ್ತಿದೆ.

ಸೂಕ್ತವಾದ ಪೋಷಣೆ ಸಿಗದೆ ತನ್ನ ಅಸ್ತಿತ್ವವನ್ನು ಕಳೆದುಕೋಳ್ಳುತ್ತಿದೆ. ಬಾಗಶಃ ಈ ತೋಗಲುಗೊಂಬೆಯಾಟ ಕಾಣಸಿಗುವುದು ಕಡಿಮೆಯಗಿದೆ. ಬಹಳ ಹಿಂದಿನ ಕಾಲದಲ್ಲಿ ಹಿರಿಯರು ಗ್ರಾಮದ ಮುಖಂಡರು ಸೇರಿ ಊರೂರು ಸುತ್ತಿ ತೊಗಲುಗೊಂಬೆ ಆಡಿಸುವವರನ್ನು ಕರೆತಂದು ಕಾರ್ಯಕ್ರಮ ಕೊಡಿಸುತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಆ ಕಲೆಯು ನಶಿಸಿ ಮುಂದಿನ ತಲೆಮಾರಿಗೆ ಈ ತೊಗಲುಗೊಂಬೆಯ ಮಹತ್ವ ಕಾಣಸಿಗದಂತಾಗಿದ್ದು ದುರಂತವೇ ಸರಿ. ಈ ಕಲೆಯ ಅವಶೇಗಳು ಅವತರಣೀಕೆಗಳು ಹಾಗೂ ಮೂಲ ತೊಗಲುಗೊಂಬೆಗಳನ್ನು ಜಾನಪದ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿರುವುದು ಆ ಸಂಸ್ಕೃತಿಯನ್ನು ಒಂದು ಮಟ್ಟಿಗೆ ಸಂಗ್ರಹಿಸುವಲ್ಲಿ ಯಶಸ್ವಿಯಾಗಿದ್ದೇವೆ ಎಂದರೆ ತಪ್ಪಾಗಲಾರದು.

**ಐತಿಹಾಸಿಕ ಮಹತ್ವ**

ಜಾನಪದ ವಸ್ತುಸಂಗ್ರಹಾಲಯದವು ಐತಿಹಾಸಿಕ ವಿಚಾರಗಳ ಆಗವಾಗಿದೆ, ಭಾರತದಾದ್ಯಂತ ಸಂಶೋಧಕರಿಗೂ, ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಐದು ದಶಕಗಳಿಗೂ ಮೀರಿ ವಿಚಾರಗಳು ಮತ್ತು ಸಂಶೋಧನೆ ವಿಷಯದಲ್ಲಿ ಕುತೂಹಲಕಾರಿ ಸಂಗತಿಗಳನ್ನು ಒದಗಿಸಿಕೊಟ್ಟಿದೆ. ಇದಕ್ಕೂ ಸಾಕ್ಷಿಯೆಂಬಂತೆ 1985 ಮತ್ತು 1992 ರಲ್ಲಿ ಇಂಗ್ಲೆಂಡಿನಲ್ಲಿ ಜಾನಪದ ವಸ್ತುಸಂಗ್ರಹಾಲಯದ ವಸ್ತುಗಳು ಪ್ರದರ್ಶನಗೊಂಡಿದ್ದವು. ಬ್ರೀಟಿಷ್ ಸರ್ಕಾರ ಇದರ ವ್ಯವಸ್ಥೆ ಮಾಡಿತ್ತು.

ಈ ವಿಭಾಗದಲ್ಲಿ 600 ಕ್ಕೂ ಹೆಚ್ಚು ಕಲಾಕೃತಿಯುಳ್ಳ ಕಲಾಶಾಲೆಯೂ ಮತ್ತು ಸಾಹಿತಿಗಳಿಗೆ ಸಂಬಂಧಿಸಿದ ಹಾಗೂ ಅವರ ಸಾಹಿತ್ಯಕ್ಕೆ ಸಂಬಂಧಿಸಿದ ವಸ್ತುಗಳಿವೆ. ನಾಡಿನ ಹೆಸರಾಂತ ಲೇಖಕರ ಕೈ ಬರವಣಿಗೆಗಳು, ಉಪಯೋಗಿಸಿದ ಲೇಖನಿಗಳು, ವಸ್ತುಗಳು ಹೀಗೆ ಅನೇಕ ವಸ್ತುಗಳು ಪ್ರದರ್ಶನಗೊಂಡಿದೆ. ಹಾಗೂ ಗಾಂದೀಜಿಯವರು ಬಳಸಿದ ಮೈಸೂರು ಸ್ಯಾಂಡಲ್ ಸೋಪಿನ ವಿವರವನ್ನು ದಾಖಲಿಸಿ ಪ್ರದರ್ಶಿಸಲಾಗಿದೆ ಇದು ಗಾಂಧೀಜಿಯವರು ಮೈಸೂರಿಗೆ ಆಗಮಿಸಿದ ಐತಿಹಾಸಿಕ ಹಿನ್ನಲೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಸಹಾಯಕವಾಗಿದೆ

**ಜಾನಪದ ವಸ್ತುಸಂಗ್ರಹಾಲಯದ ಪ್ರದರ್ಶಿಸಲ್ಪಟ್ಟ ವಸ್ತುಗಳು**

ನಾಡಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರಾದ ಜಿಶಂಪ ಮತ್ತು ಪ್ರಸಿದ್ಧ ಕಲವಿದರಾಗಿದ್ದ ಪಿ.ಆರ್.ತಿಪ್ಪೆಸ್ವಾಮಿ ಅವರು ಸಂಗ್ರಹಾಲಯವನ್ನು ಕಟ್ಟುವ ಕಾರ್ಯದಲ್ಲಿ ಟೊಂಕ ಕಟ್ಟಿ ನಿಂತರು. ಇವರಿಬ್ಬರು ನಾಡಿನ ಮೂಲೆ ಮೂಲೆಯಲ್ಲಿ ಕ್ಷೇತ್ರಕಾರ್ಯ ನಡೆಸಿ ಮಠಮಾನ್ಯಗಳನ್ನು, ಹಳೆಯ ಮನೆಗಳನ್ನು ಶೋಧಿಸಿ ವಸ್ತುಗಳನ್ನು ಸಂಗ್ರಹಸಿದರು. ಈ ಸಂಗ್ರಹಾಲಯದಲ್ಲಿ 3 ರಥಗಳನ್ನು ತೀರ್ಥಹಳ್ಳಿ

ತಾಲೂಕಿನ ಹೊಸಬೀಡು ಮನೆಯ ಮೊಗಸಾಲೆ, 2 ದೋಣಿಗಳು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಗೊಂಬೆ ಮಂಟಪ, ಶಿವಮೊಗ್ಗ ಜಿಲ್ಲೆಯ ಮಾರಿಕಾಂಬ ಮರದ ವಿಗ್ರಹ ಮತ್ತು ಮೆಕ್ಕೆಕಟ್ಟೆಯ ಸುಮಾರು 50 ವಿಗ್ರಹಗಳನ್ನು ಸಂಗ್ರಹಿಸಲಾಗಿದೆ. ವಸ್ತುವಿನ ಪೂರ್ಣ ಮಾಹಿತಿ ಸಂಗ್ರಹಿಸಿದ ದಿನಾಂಕ, ಕೊಟ್ಟವರ ಹೆಸರು, ವಿಳಾಸ ಸಂಗ್ರಹಿಸಿದ ವಸ್ತುವಿನ ಪಾತ್ರ, ಅದರ ಬಗೆಗಿನ ನಂಬಿಕೆ ಇತ್ಯಾದಿ ವಸ್ತುವಿನ ಬಗೆಗಿನ ಲಭ್ಯ ವಿವರಗಳೊಡನೆ ವಸ್ತುವಿನ ಪುಸ್ತಕದಲ್ಲಿ ನಮೂದಿಸಲಾಗಿದೆ.

ಅಧ್ಯಯನದ ದೃಷ್ಟಿಯಿಂದ ನೋಡುವುದಾದರೆ ರಥಗಳು, ವೀರಗಲ್ಲುಗಳು ಮತ್ತು ಗೊಂಬೆಮಂಟಪ, ಯಕ್ಷಗಾನ, ವೇಷಭೂಷಣಗಳು, ಗೊಂಬೆಯಾಟ ಇದರಲ್ಲಿ 3 ನೆರಳುಗೊಂಬೆಗಳು, ನಿತ್ಯ ಬಳಕೆಯ ಸಾಧನಗಳು, ಆಭರಣಗಳು, ಆಯುಧಗಳು, ಗರಡಿ ಮನೆಯ ಸಾಧನಗಳು, ಉಡುಪುಗಳು, ವಾದ್ಯಗಳು, ಮಕ್ಕಳಾಟಿಕೆಗಳು, ವ್ಯವಸಾಯದ ವೃತ್ತಗಳು ಇದರಲ್ಲಿ 4 ವಿಭಾಗಗಳು ಬಂಗಾರದವು, ಚಮ್ಮಾರ, ಬಡಗಿ, ನಾಯಿಂದ, ಆದಿವಾಸಿ ಸಾಧನಗಳು ಹೆಂಡ ಇಳಿಸುವ ಸಾಧನಗಳು, ಹೆಣ್ಣು ಮಕ್ಕಳಿನ ಕೈಕಸುಬಿನ ಸಾಧನಗಳು, ಪ್ರತಿ ವಿಭಾಗದ ವಸ್ತುಗಳು ಕರ್ನಾಟಕ ಸಾಂಸ್ಕೃತಿಕ ಜೀವನದ ಮಜಲುಗಳನ್ನು ಬಿಂಬಿಸುತ್ತದೆ. ಸಾಧನಗಳಲ್ಲಿ ವೈವಿಧ್ಯತೆ ಇದ್ದು ಗ್ರಾಮೀಣ ಜನರ ನೈಪುಣ್ಯತೆಗೆ ಇವು ಸಾಕ್ಷಿಯಾಗಿವೆ.

ಸಂಗ್ರಹಾಲಯವನ್ನು ಪ್ರವೇಶಿಸಿದರೆ ಮುಂಭಾಗದಲ್ಲಿಯೇ 3 ದೊಡ್ಡ ರಥಗಳಿರುವುದು. ಅವು ತಮ್ಮ ಸುಂದರ ಕೆತ್ತನೆಗಳಿಂದ ಬೆರಗು ಮೂಡಿಸುವಂತಿದೆ. ಈ ರಥಗಳಲ್ಲಿ ರಾಮಾಯಣದ ಮುಖ್ಯ ಘಟನೆಗಳನ್ನು ಕೆತ್ತಿರುವುದಲ್ಲದೆ, 8 ದ್ವಿಕಲ್ಪಾಕಾರ ನೋಡಬಹುದು. ನವರಾತ್ರಿ ಗೊಂಬೆಗಳು ನೋಡುಗರನ್ನು ಸೆಳೆಯುತ್ತದೆ. ಇವುಗಳನ್ನು ಮಣ್ಣು, ಮರ, ಕಲ್ಲು, ಬಟ್ಟೆ ಹೀಗೆ ಬೇರೆ ಬೇರೆ ಸಾಧನಗಳನ್ನು ಬಳಸಿಕೊಂಡು ತಯಾರಿಸಲಾಗಿದೆ.

ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಕಲ್ಪನೆ ಮೂಡುವ ಮೊದಲು ಹೀಗೆ ಗೊಂಬೆಗಳನ್ನು ನವರಾತ್ರಿಯಲ್ಲಿ ಪ್ರದರ್ಶನಕ್ಕಿಡುವುದೇ ಪ್ರಧಾನವಾಗಿತ್ತು. 9 ದಿನಗಳು ಪ್ರದರ್ಶನಕ್ಕಿಟ್ಟು ಬಂಧುಗಳನ್ನು, ಸ್ನೇಹಿತರನ್ನು ಕರೆದು ತೋರಿಸುವ ವಾಡಿಕೆಯಾಯಿತು. ಈ ಸಂಗ್ರಹಾಲಯದ ಮುಖ್ಯ ವಸ್ತುವೆಂದರೆ ಸುಮಾರು 7 ಅಡಿ ಎತ್ತರದ ಮಾರಿಕಾಂಬ ದೇವಿಯ ಮುಖವಿರುವ ಮರದ ಪ್ರತಿಮೆ ಇದೆ. ಇದರ ಕೈಕಾಲುಗಳನ್ನು ಬಿಡಿ ಬಿಡಿಯಾಗಿಯೇ ಪ್ರದರ್ಶಿಸಲಾಗಿತ್ತು. 2004ರಲ್ಲಿ ಸಂಗ್ರಹಾಲಯದ ಕಟ್ಟಡ ದುರಸ್ತಿಯಾದ ನಂತರ ಸುಮಾರು 16 ಅಡಿಗಳ ಎತ್ತರದಲ್ಲಿ ಕುಳಿತ ಭಂಗಿಯಲ್ಲಿ ಮಾರಿಕಾಂಬ ಪ್ರತಿಮೆಯನ್ನು ಜಯಲಕ್ಷ್ಮೀವಿಲಾಸದ ಉತ್ತರ ಭಾಗದ ದ್ವಾರದ ಬಳಿ ಸ್ಥಾಪಿಸಲಾಗಿದೆ. ಈ ಪ್ರತಿಮೆಯು

ಈಗ ಸಂಗ್ರಹಾಲಯದ ಪ್ರಧಾನ ಆಕರ್ಷಣೆಯಾಗಿದೆ. ಇದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಿಂದ ಸಂಗ್ರಹಿಸಿ ತಂದದ್ದಾಗಿದೆ.

ಈಗಿನ ಹೂಜಿಯನ್ನು ಹೋಲುವ ಒಂಟೆಯ ಡಬ್ಬೀ ಸಂಗ್ರಹಾಲಯದ ಮತ್ತೊಂದು ವಿಶೇಷ. ಹಿಂದೆ ಒಂಟೆ ಸತ್ತ ನಂತರ ಅದರ ಡುಬ್ಬವನ್ನು ಬೇರ್ಪಡಿಸಿ ಒಳ ತಿರುಳನ್ನು ಹೊರ ತೆಗೆದು, ಹದ ಮಾಡಿ ತುಪ್ಪ, ಎಣ್ಣೆ ಮುಂತಾದ ದ್ರವ ಪದಾರ್ಥವನ್ನು ಸಂಗ್ರಹಿಸಲು ಬಳಸುತ್ತಿದ್ದರು. ಸಂಗ್ರಹಾಲಯದಲ್ಲಿರುವ ಮೆಕ್ಕೆ ಕಟ್ಟೆಯ ಮರದ ವಿಗ್ರಹಗಳು ವಿಶ್ವವಿಖ್ಯಾತಿಯನ್ನು ಗಳಿಸಿಕೊಂಡಿವೆ. ಇವುಗಳ ಕೆತ್ತನೆ ಕಲಾ ನೈಪುಣ್ಯತೆ ಎಂತಹವರನ್ನು ಬೆರಗುಗೊಳಿಸುತ್ತದೆ. ಸಂಗ್ರಹಾಲಯದಲ್ಲಿ ಈ ಬಗೆಯ 50 ವಿಗ್ರಹಗಳಿದ್ದು ಅವು ಚಾಮರಗಿತ್ತಿ, ನಂದಿ, ಕೋಣ, ತ್ರಿಮುಖ ಬ್ರಹ್ಮ, ಜೋಗಿ ಮಂಟಪ ತನ್ನ ಕೌಶಲ್ಯದಿಂದ ಉಪಯೋಗಿಸದೆ ಜೋಡಿಸಿರುವುದಂತೂ ಅನನ್ಯ. ಇದರ ಅಲಂಕಾರಕ್ಕೆ ಜೀರುಂಡೆ ಹುಳದ ರೆಕ್ಕೆಯನ್ನು ಬಳಸಲಾಗಿದೆ. ಗೊಂಬೆಯ ಮಂಟಪ, ದೇವರ ಮಂಟಪ, ಗಣಪತಿ ಮಂಟಪ ಎಂದು ಅನೇಕ ಹೆಸರುಗಳಿಂದ ಕರೆಯಲಾಗಿ, ಈ ಕಲಾತ್ಮಕ ಮಂಟಪವನ್ನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಶಿವಯೋಗಿ ಮಂದಿರದಿಂದ ತರಲಾಗಿದೆ.

ಸಂಗ್ರಹಾಲಯದಲ್ಲಿ ಅತ್ಯುತ್ತಮವಾದ ಯಕ್ಷಗಾನ ವೇಷಭೂಷಣಗಳ ಸಂಗ್ರಹವಿದ್ದು ಅಧ್ಯಯನಕ್ಕೆ ಇಂಬು ನೀಡುತ್ತದೆ. ಕರ್ನಾಟಕದ ತಿಂಕ ತಿಟ್ಟು, ಬಡಗು ತಿಟ್ಟು, ಮೂಡಲಪಾಯ,ಘಟ್ಟದ ಕೊರೆ, ಉತ್ತರ ಕರ್ನಾಟಕದ ದೊಡ್ಡಾಟ, ಆಂಧ್ರಪ್ರದೇಶದ ವಿಧಿನಾಟಕ, ಕೇರಳದ ಕಥಕ್ಕಳಿ ಮತ್ತು ತಮಿಳುನಾಡಿನ ತೇರುಕ್ಕೂತ್ತು ಕಲೆಗಳಿಗೆ ಸಂಬಂಧಿಸಿದ ವೇಷಭೂಷಣಗಳ ಭಂಡಾರವೇ ಇಲ್ಲಿ ಸೇರಿದೆ. ಸಂಗ್ರಹಾಲಯದ ಗೊಂಬೆಗಳ ವಿಭಾಗ ಕೂಡ ಸಮೃದ್ಧವಾದ ಸಾಧನಗಳನ್ನು ಹೊಂದಿದೆ. ಇಲ್ಲಿನ ಕೀಲು ಗೊಂಬೆಗಳು ರಾಷ್ಟ್ರದಲ್ಲಿ ಅತಿ ವಿರಳವಾದ ಗೊಂಬೆಗಳೆಂಬ ಪ್ರಶಂಸೆಗೆ ಪಾತ್ರವಾಗಿದೆ. ಈ ವಿಭಾಗದ ಗಣೇಶ, ಭಿಕ್ಷುಕ, ಹಾಸ್ಯಗಾರ, 3 ಅಡಿ ಎತ್ತರವಾಗಿದ್ದು ನೋಡಲು ತುಂಬಾ ಮಧುರವಾಗಿದೆ. ಈ ಗೊಂಬೆಗಳು ತುಮಕೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ ಅನಾಥವಾದವುಗಳನ್ನು ಸಂಗ್ರಹಿಸಲಾಗಿದೆ.

ಸಂಗ್ರಹಾಲಯದ ನೆರಳು ಗೊಂಬೆಗಳಂತೂ ಕಿನ್ನರ ಲೋಕವನ್ನು ತೆರೆಯುತ್ತವೆ. ಇಲ್ಲಿ ನೂರಕ್ಕೂ ಹೆಚ್ಚು ಗೊಂಬೆಗಳು ಪ್ರದರ್ಶನಗೊಂಡಿವೆ. ಈ ಪೈಕಿ ಬಂಗಾರಕ್ಕ, ಸಿಳ್ಯಾಕ್ಯಾತ, ರಾಕ್ಷ ಪಾತ್ರಗಳು ಹಾಗೂ ಸ್ತ್ರೀಪಾತ್ರವು ಕಲಾವಿದನ ಅದ್ಭುತ ಸೃಷ್ಟಿಗೆ ನಿದರ್ಶನ. ಈ ಗೊಂಬೆಯನ್ನು ಸಿದ್ಧಪಡಿಸಲು ಜಿಂಕೆ, ಆಡು, ಕುರಿ ಮುಂತಾದ ಪ್ರಾಣಿಗಳ ಚರ್ಮಗಳನ್ನು ಬಳಸಲಾಗಿದೆ. ಇಲ್ಲಿ ಸಂಗ್ರಹಗೊಂಡ ಗೊಂಬೆಗಳಲ್ಲಿ ಎರಡು ವಿಧಗಳಿವೆ ಒಂದು ದೊಡ್ಡಾಟದ ಗೊಂಬೆಗಳು, ಇನ್ನೊಂದು ಸಣ್ಣಾಟದ ಗೊಂಬೆಗಳು. ದೊಡ್ಡಾಟದ ಗೊಂಬೆಗಳನ್ನು ನಿಂತು ಮತ್ತು ಸಣ್ಣಾಟದ ಗೊಂಬೆಗಳನ್ನು ಕುಳಿತು ಆಡಿಸುತ್ತಾರೆ.

ನಿತ್ಯ ಬಳಕೆ ವಸ್ತುಗಳಲ್ಲಿರುವ ವಿಭಾಗಗಳಲ್ಲಿ ವಿವಿಧ ನಮೂನೆಯ ರುಬ್ಬುವ ಕಲ್ಲುಗಳು, ಕಡೆಗೋಲುಗಳು, ಕೊಣಮಿಗೆ, ಕೈಪಾಳು, ಬೆಣ್ಣೆ ಇಡುವ ಮರದ ಪಾತ್ರೆ ಮುಂತಾದವುಗಳು ಕಂಡುಬರುತ್ತದೆ. ಬೆಣ್ಣೆ ಇಡುವ ಪಾತ್ರೆಯನ್ನು 40 ವರ್ಷಗಳ ಹಿಂದೆ ಸಂಗ್ರಹಿಸಿದ್ದರು. ಇಂದಿಗೂ ಅದರ ಮುಚ್ಚಳವನ್ನು ತೆರೆದರೆ ತಾಜಾ ಬೆಣ್ಣೆಯ ಕಂಪು ಮೂಗನ್ನು ಅರಳಿಸುತ್ತದೆ. ಇಲ್ಲಿ ಸಂಗ್ರಹಿಸಿರುವ ಪಡುವಾರಹಳ್ಳಿಯ ಬಾನದ ಸಾಲು ವಿಶೇಷ. ಇದು ಅದರ ಒಡೆತನದವರ ಅಂತಸ್ತನ್ನು ತಿಳಿಸುತ್ತದೆ. ಬಾನದ ಸಾಲು ಎಂದರೆ ದೊಡ್ಡ ದೊಡ್ಡ ಗುಡಾಣಗಳನ್ನು ಒಂದರ ಮೇಲೊಂದರಂತೆ ಸೇರಿಸಿಟ್ಟು ಧವಸ ಧಾನ್ಯಗಳನ್ನು ಸಂಗ್ರಹಿಸಿಡಲು ಉಪಯೋಗಿಸುವ ಮಣ್ಣಿನ ದೊಡ್ಡ ಮಡಿಕೆಗಳೆಂದು ಹೇಳಬಹುದು.

ಸಂಗ್ರಹಾಲಯದ ಆಭರಣ ಸಂಗ್ರಹದಲ್ಲಿ ನಾನಾ ಮಾದರಿಯ ಆಭರಣಗಳನ್ನು ನೋಡಬಹುದು. ಸಣ್ಣ ತಾಳಿ, ದೊಡ್ಡ ತಾಳಿ, ಜೋಡಿ ತಾಳಿ, ನಡುಪಟ್ಟಿ, ಗೆಜ್ಜೆಪಟ್ಟಿ, ಬೆಳ್ಳಿ ಉಡಿದಾರ, ರುಳಿ, ರಗಾಟೆ, ಮೂಗುತಿ, ಕೈಕಡಗ ಇತ್ಯಾದಿಗಳನ್ನು ಸಂಗ್ರಹಿಸಿದ್ದಾರೆ. ಹಾಗೆಯೇ ಗಂಧದ ಮತ್ತು ಮರದ ಬಾಚಣಿಗೆಗಳು, ಎಣ್ಣೆ ತುಂಬೆ ಬಾಚುವ ಬೆಳ್ಳಿ ಮತ್ತು ಹಿತ್ತಾಳೆಯ ಸಿಕ್ಕಟ್ಟೆಗಳು ಪ್ರದರ್ಶನದಲ್ಲಿದೆ. ಸಂಗ್ರಹಾಲಯದಲ್ಲಿ ಬಗೆಬಗೆಯ ನಶ್ಯ ಡಬ್ಬಿಗಳಿವೆ. ಅವುಗಳು ಬೆಳ್ಳಿ ಹಿತ್ತಾಳೆ ಮರದ ಕಾಯಿ ಹೀಗೆ ಬೇರೆ ಬೇರೆ ಲೋಹದ ಮತ್ತು ಸಸ್ಯ ಮೂಲದಿಂದ ತಯಾರಾಗಿವೆ. ಸಂಗ್ರಹಾಲಯದಲ್ಲಿರುವ ಮೈಸೂರು ಹುಲಿ ಟಿಪ್ಪು ಸುಲ್ತಾನನ ಕಾಲದ್ದೆಂದು ಹೇಳುವ ಉಪ್ಪಿನಕಾಯಿ ಜಾಡಿ ತನ್ನ ಗಾತ್ರದಿಂದ ಗಮನ ಸೆಳೆಯುತ್ತದೆ. ಸೂಳ್ಯ ತಾಲೂಕಿನ ಒಂದು ಹಳ್ಳಿಯಲ್ಲಿ ಸಂಗ್ರಹಿಸಿದ ಸುಮಾರು 150 ವರ್ಷಗಳ ಹಿಂದೆ ಬಳಸಲ್ಪಟ್ಟಿದ್ದ ಬಟ್ಟೆ ಇಡುವ ಮಣ್ಣಿನ ಪಾತ್ರೆ ಕರಜನ ಎಂಬ ವಸ್ತುವಂತೂ ಜನಪದರ ಭೌತಿಕ ಸಂಸ್ಕೃತಿಯನ್ನರಿಯಲು ಸಹಕಾರಿಯಾಗಿದೆ.

ಸಂಗ್ರಹಾಲಯದಲ್ಲಿ ಆಯುಧ ವಿಭಾಗದಲ್ಲಿ ಅಂದಿನ ಜನರ ಸಾಹಸ ಜೀವನವನ್ನು ಬಿಂಬಿಸುವ ನಾನಾ ಆಕಾರದ ಆಯುಧಗಳು ಪ್ರದರ್ಶಿಸಲ್ಪಟ್ಟಿವೆ. ಈ ವಿಭಾಗದಲ್ಲಿರುವ ಉತ್ತರ ಕರ್ನಾಟಕ ಭಾಗದ ಕಟ್ಟು ಬಡ್ಡಿಗೆ ಮತ್ತು ಮಲೆನಾಡಿನ 12 ಅಡಿ ಉದ್ದ ಬತ್ತಿ ಕೋವಿ ಆಯಾ ಭಾಗದ ಜನರ ಜೀವನವನ್ನು ತಿಳಿಸುವ ಸಾಧನವಾಗಿದೆ.

ವಾದ್ಯ ವಿಭಾಗದಲ್ಲಿ ನಗಾರಿಗಳು, ಕಿನ್ನರಿಗಳು, ಕಂಸಾಳೆಗಳು, ಜಗ್ಗಲಗೆಗಳು, ಚೌಗಾಢ್, ತ್ರಾಸ್‌ಮಾರ್, ಕುಣಿಮಿಣಿ ವಾದ್ಯ, ಗುಮ್ಮಟೆ, ಚಂದ್ರ ವಾದ್ಯ, ರಣಕಹಳೆ, ಓಲಗ, ಗಣೆ, ಜುಂಜಪ್ಪನ ಗಾಣೆ, ದೇವರ ಕರೆಸುವ ಬುರುಡೆ,ಎಳವರಗಂಟೆ, ಡೊಳ್ಳು ಕುಣಿತಕ್ಕೆ ಶ್ರುತಿಯಾಗಿ ಬಳಸುವ ಮರದ ಗಿಣ್ಣಿ ಮತ್ತಿತರ ವಾದ್ಯ ಪರಿಕಲಾರಗಳು ಜಾನಪದ ವಾದ್ಯಗಳ ವೈವಿಧ್ಯತೆಗಳನ್ನು ಹೇಳುವಂತಿವೆ. ಮೈಸೂರು ಗರಡಿ ಕಲೆಗೂ ಪ್ರಸಿದ್ಧವಾದ್ದರಿಂದ ಸಂಗ್ರಹಾಲಯದಲ್ಲಿ ಗರಡಿಯ ಸಾಧನಗಳು ಸಾಕಷ್ಟಿವೆ. ಸುಮಾರು 100 ವರ್ಷಗಳ ಹಿಂದಿನಿಂದ ಬಳಸುತ್ತಿದ್ದ ಮರದ ಗದೆಗಳು ಗರ್ಜನ್ ಕಲ್ಲುಗಳು ಮತ್ತು ಬಂಡೆ

ಕಲ್ಲುಗಳು ಮರುಗಾಲುಗಳು, ಕುಸ್ತಿ ಕಲೆ ಬೆಳೆದು ಬಂದ ಹೆಜ್ಜೆಯ ಗುರುತನ್ನು ಹೇಳುತ್ತವೆ. ಸಂಗ್ರಹಾಲಯದಲ್ಲಿರುವ ವೃತ್ತಿಪರವಾದ ಸಾಧನಗಳಲ್ಲಿ ಚಮ್ಮಾರ, ಕಮ್ಮಾರ, ಚಿನ್ನ, ಬೆಳ್ಳಿ ಮತ್ತು ಕ್ಷೌರಿಕ ವೃತ್ತಿಯ ವಸ್ತುಗಳು ಇದ್ದು ಅಚ್ಚುಕಟ್ಟಾಗಿ ಪ್ರದರ್ಶನಗೊಂಡಿವೆ.

ಮೀನುಗಾರಿಕೆಯ ಬಲೆಗಳು, ಕುಳಿಗಳು, ಕತ್ತಿಗಳು, ಮೀನು ಹಿಡಿಯುವ ಸಣ್ಣ ದೋಣಿಗಳು ಮುಂತಾದವುಗಳು ಮೀನುಗಾರಿಕೆ ವಿಭಾಗದಲ್ಲಿವೆ. ಬೀಜ ಬಿತ್ತುವ ಸೆರಗಿನ ಮೊರ, ಮೀನು ಚೊಬ್ಬೆ, ಕೂಗಲ ಬಳ್ಳಿಯ ಎಲೆಯ ಅಡಿಕೆಯ ತಟ್ಟೆ, ಚಿಬ್ಬಾಳು, ಕೊಮ್ಮೆ, ಕೊಂಗುಮರ, ಕುಕ್ಕೆ, ಜಲ್ಲೆ, ಬಿದಿರ ಜಲ್ಲೆ, ಈಚಲು ಚಾಪೆ, ಇಡಗಲ್ಲು ಹೀಗೆ ಸುಮಾರು 250ಕ್ಕೂ ಹೆಚ್ಚು ಸಾಧನಗಳು ಸಂಗ್ರಹಗೊಂಡಿವೆ. ರೈತಾಪಿ ಜನರು ಬಳಸುವ ಕೃಷಿ ಸಾಧನಗಳಂತೂ ಭಾರತ ಕೃಷಿ ಪ್ರಧಾನವಾದ ದೇಶ ಎಂಬುದಕ್ಕೆ ಸಾಕ್ಷಿಯಾಗಿದೆ. ರೈತಾಪಿ ಸಾಧನಗಳಲ್ಲಿಯೂ ಕಲಾವಂತಿಕೆ ಎದ್ದು ಕಾಣುತ್ತದೆ. ಹೆಂಡ ಮತ್ತು ಕಳ್ಳು ತಯಾರಿಸುವ ಸಾಧನಗಳು ಇಲ್ಲಿ ಜಾಗ ಪಡೆದಿವೆ. ಲೈಸೆನ್ಸ್ ಡಬ್ಬಿ, ಚರ್ಮದ ಚೀಲ, ಸೊಂಟದ ಪಟ್ಟಿ ಮುಂತಾದವುಗಳು ಈ ವಿಭಾಗದ ಸಾಧನಗಳು.ಮಕ್ಕಳ ಆಟಿಕೆ ವಿಭಾಗದಲ್ಲಿ ಆ ಕಾಲದ ಮಕ್ಕಳ ಆಟಿಕೆಗಳು ಹೇಗಿದ್ದವು ಎಂಬುದನ್ನು ತಿಳಿಯಬಹುದು. ಮರದ ಗಿಣಿ, ಬಸವ, ನಾಯಿ, ವಿವಿಧ ಬಗೆಯ ತರಕಾರಿಗಳು, ಹೆಣ್ಣು ಮಕ್ಕಳಾಟದಲ್ಲಿ ಬಳಸುತ್ತಿದ್ದ ಅಡುಗೆ ಸಾಧನಗಳ ಮಾದರಿಗಳು, ಅಳುಗುಣಿ ಮಣೆ ಜೊತೆಗೆ ಕಿನ್ನಾಳದ ವಿವಿಧ ನಮೂನೆಯ ಆಟಿಕೆಗಳು ಇಲ್ಲಿವೆ.

ಕರ್ನಾಟಕದ ಭೌತಿಕ ಜಾನಪದವನ್ನು ಅಧ್ಯಯನ ಮಾಡುವಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯ ಒಂದು ಉತ್ತಮ ಮಾಹಿತಿ ಕೇಂದ್ರವಾಗಿದೆ. ಏಕೆಂದರೆ ಆಯಾ ಕಾಲದ ಭೌತಿಕ ವಿಜ್ಞಾನವನ್ನು ತಿಳಿಯಲು ಇಂತಹ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿರುವ ವಸ್ತುಗಳು ಮಾತ್ರ ಮೂಲ ಪರಿಕರಗಳಾಗಿ ಕೆಲಸ ಮಾಡುತ್ತವೆ. ಸಂಗ್ರಹಿಸಿದ ಸಾಧನಗಳು ಬದುಕಿನ ಅನೇಕ ಮಜಲುಗಳನ್ನು ತೆರೆದಿಡುತ್ತದೆ. ಇವುಗಳ ಅಧ್ಯಯನ ಮಾಡುವುದರಿಂದ ಜನಪದರು ಬದುಕಿದ ರೀತಿ, ಅನ್ಯ ಸಂಸ್ಕೃತಿಯ ಪ್ರಭಾವ, ಪರಸ್ಪರ ಕೋಳು ಕೋಡಿಗೆಗಳನ್ನು ಗುರುತಿಸಬಹುದು.ಸಂಗ್ರಹಾಲಯದ ವಸ್ತುಗಳನ್ನು ಇಡುವ ಕ್ರಮದಲ್ಲಿ ಈಗ ಬದಲಾವಣೆಗಳಾಗಿವೆ. ಪ್ರದರ್ಶಿಸಿರುವ ರೀತಿ ಸಂಪೂರ್ಣ ಬೇರೆ ರೀತಿಯಲ್ಲಿವೆ. ಕಟ್ಟದ ಹೊರ ಭಾಗದಲ್ಲಿ ತಮಿಳುನಾಡಿನ ಶೈಲಿಯ ಮಣ್ಣಿನ ಗೊಂಬೆಗಳನ್ನು ಇಡಲಾಗಿದೆ. ಜಾನಪದ ವಸ್ತುಸಂಗ್ರಹಾಲಯಕ್ಕೆ ಹೋಗುವ ಹಾದಿಯಲ್ಲಿ ಶ್ವಾನ ಸ್ಮಾರಕ ಕಲ್ಲುಗಳನ್ನು ನೆಡಲಾಗಿದೆ.

ಎಲ್ಲಾ ವಿಭಾಗದ ವಸ್ತುಗಳನ್ನು ಸೇರಿಸಿ ಪ್ರದರ್ಶನಕ್ಕಿಟ್ಟಿದೆ. ಮಾನಸಗಂಗೋತ್ರಿಯಲ್ಲಿರುವ ಈ ಜಾನಪದ ವಸ್ತುಸಂಗ್ರಹಾಲಯ ನಾಡಿನ ಪರಂಪರೆಯನ್ನು ನಮ್ಮ ಕಣ್ಣುಗಳ ಮುಂದೆ ತೆರೆದಿಡುವ ಕೇಂದ್ರ ಬಿಂದುವಾಗಿದೆ.

ಒಟ್ಟಾರೆಯಾಗಿ ಇಷ್ಟೆಲ್ಲಾ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿರುವ ಜಾನಪದ ಶಿಥಿಲಾಸ್ಥೆಯಲ್ಲಿದೆ. 2000–2001ನೇ ಸಾಲಿನಲ್ಲಿ ಕಟ್ಟಡದ ವಾಸ್ತು ಮತ್ತು ವೈಭವ ಹಾಗೂ ಜಾನಪದ ವಸ್ತುಸಂಗ್ರಹಾಲಯದ ಮಹತ್ವ ಮತ್ತು ವಿಶೇಷತೆಯನ್ನು ಗಮನಿಸಿ ಇನ್ಫೋಸಿಸ್ ಚಾರಿಟಿ ಟ್ರಸ್ಟಿನ ಅಧ್ಯಕ್ಷರಾದ ಸುಧಾಮೂರ್ತಿಯವರು ದೇಣಿಗೆ ನೀಡಿ ಆಧುನೀಕರಿಸಲು ಸಹಾಯ ಮಾಡಿದರು. ಕಟ್ಟಡ ಪುನಶ್ಚೇತನಗೊಂಡಿದ್ದು ಸರಿಯಷ್ಟೆ ಇಂದಿನ ದಿನಗಳಲ್ಲಿ ಸರಿಯಾದ ನಿರ್ವಹಣೆ ಇಲ್ಲದೆ ಈ ಕಟ್ಟಡ ಕುಸಿಯುತ್ತಿದ್ದು ಜಗತ್ಪ್ರಸಿದ್ಧವಾದ ಅದನ್ನು ರಕ್ಷಿಸುವ ಕಾರ್ಯವಾಗಬೇಕಿದೆ. ಅಂತಹ ಸಾಂಸ್ಕೃತಿಕ ಮತ್ತು ಐತಿಹಾಸಿಕ ಮಹತ್ವವಿರುವಂತಹ ಜಾನಪದ ವಸ್ತುಸಂಗ್ರಹಾಲಯದಲ್ಲಿರುವುದು ಹೆಮ್ಮೆಯ ವಿಷಯ. ಈ ವಿಚಾರವಾಗಿ ಅಳಿವಿನಂಚಿನಲ್ಲಿರುವ ಜಾನಪದ ವಸ್ತುಸಂಗ್ರಹಾಲಯವನ್ನು ಶಿಥಿಲಾವಸ್ಥೆಯಿಂದ ಸುಸ್ಥಿತಿಯಡೆಗೆ ತರುವಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ಪಾತ್ರ ಮಹತ್ವದ್ದಾಗಿದೆ.

**ಛಾಯಚಿತ್ರಗಳು**



**ಜಾನಪದ ವಸ್ತುಸಂಗ್ರಹಾಲಯ**



**ವಸ್ತುಸಂಗ್ರಹಾಲಯ ದ್ವಾರ**



**ಮಾರಿಕಾಂಭ ಮಾದರಿ**



**ಜಾನಪದ ವಸ್ತುಸಂಗ್ರಹಾಲಯ ಪಾರ್ಶ್ವನೋಟ**



ವಸ್ತುಸಂಗ್ರಹಾಲಯದ ಒಳನೋಟ



ಬಯಲಾಟದ ಮಂಟಪ



ರಾವಣ



ತೊಗಲುಗೊಂಬೆ

**ಪರಾಮರ್ಶನ ಗ್ರಂಥಗಳು**


1) ಕನ್ನಡ ಜಾನಪದ ವಿಶ್ವಕೋಶ (ಕರಕುಶಲ ಕಲೆಗಳು), 2000, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
2) ಚಂದ್ರಶೇಖರ ಕಂಬಾರ, 1985, ಕನ್ನಡ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3) ಕನ್ನಡ ವಿಶ್ವಕೋಶ – 14ನೇ ಸಂಪುಟ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
4) ಕನ್ನಡ ವಿಶ್ವಕೋಶ(ಜಾನಪದ), 2006, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ.
5) ರಾಮಣ್ಣ ಯು.ಎಸ್. 2004, ಜಾನಪದ ವಸ್ತುಸಂಗ್ರಹಾಲಯ, ಕನ್ನಡ ಭಾರತಿ ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.

6) ಗೌರಮ್ಮ.ಎಚ್.,2013, ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತುಸಂಗ್ರಹಾಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ.
7) ಕಣಜ ಮೈಸೂರು ತಾಲೂಕು ಪ್ರವಾಸಿ ತಾಣಗಳು,ಅಂತರ್ಜಾಲ–ಕನ್ನಡ ಜ್ಞಾನಕೋಶ(22–04–2016)
8) ಕನ್ನಡ ಜಾನಪದ ಬ್ಲಾಗ್
9) Native planet Mysore –folklore museum.